# ಇರುವೆ ಹಾಡಿದಾಗ...

ವೆಂಕಟ್ ಭಾರದ್ವಾಜ್ ನಿರ್ದೇಶನದ 'ಕೆಂಪಿರ್ವೆ' ಗಾಂಧಿನಗರದ ಗಮನಸೆಳೆದಿರುವ ಹೊಸ ಸಿನಿಮಾ. ಎಚ್.ಜಿ. ದತ್ತಾತ್ರೇಯ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಸಿನಿಮಾ ಇತ್ತೀಚಿನ ವರ್ಷಗಳಲ್ಲಿ ಕಥೆ ಹಾಗೂ ನಿರೂಪಣೆಯಲ್ಲಿನ ವೈವಿಧ್ಯದ ಮೂಲಕ ಸಹೃದಯರ ಗಮನಸೆಳೆದಿರುವ ಪ್ರಯೋಗಶೀಲ ಚಿತ್ರಗಳ ಸಾಲಿಗೆ ಸೇರುವ ಉಮೇದಿನಲ್ಲಿದೆ.

ದತ್ತಣ್ಣ ಅವರಿಗೆ ವೃತ್ತಿಜೀವನದ ಮತ್ತೊಂದು ಭಿನ್ನ ಪಾತ್ರದಲ್ಲಿ ನಟಿಸಿರುವ ಸಡಗರ. ನಿರ್ದೇಶಕ ವೆಂಕಟ್ ಪ್ರತಿಭೆಯ ಬಗ್ಗೆ ಅವರಿಗೆ ವಿಪರೀತ ನೆಚ್ಚು. ಈ ಸಿನಿಮಾದ ಮೂಲಕ ಕನ್ನಡ ಚಿತ್ರರಂಗಕ್ಕೊಂದು ಒಳ್ಳೆಯ ಸಿನಿಮಾದ ಜೊತೆಗೆ ಪ್ರತಿಭಾನ್ವಿತ ನಿರ್ದೇಶಕನೂ ದೊರೆಯುವ ವಿಶ್ವಾಸ ಅವರದು.

ಕಳೆದ ವಾರ 'ಕೆಂಪಿರ್ವೆ' ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆಗೊಂಡಿತು. ಸೀಡಿ ಬಿಡುಗಡೆ ಮಾಡಿದ 'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ' ಅಧ್ಯಕ್ಷ ಸಾ.ರಾ. ಗೋವಿಂದು ಸಿನಿಮಾದ ಶೀರ್ಷಿಕೆಯೇ ಚಿತ್ರವನ್ನು ನೋಡಲು ಆಹ್ವಾನದಂತಿದೆ ಎಂದರು. 'ಚಿತ್ರದ ಶೀರ್ಷಿಕೆ ಸೊಗಸಾಗಿದೆ. ಜೋಪಾನ ಕಚ್ಚುತ್ತೆ ಎನ್ನುವ ಅಡಿ ಟಿಪ್ಪಣಿಯೂ ಕುತೂಹಲಕರವಾಗಿದೆ' ಎಂದ ಅವರು, ಚಿತ್ರತಂಡಕ್ಕೆ ಶುಭಹಾರೈಸಿದರು. ಒಳ್ಳೆಯ ಕಥೆಯನ್ನು ಬೆಳ್ಳಿತೆರೆಗೆ ತರುವಂತೆ ಹೊಸ ನಿರ್ಮಾಪಕ–ನಿರ್ದೇಶಕರಿಗೆ ಕರೆ ನೀಡಿದ ಅವರು, ಅತ್ಯುತ್ತಮ ಕಥೆ–ಚಿತ್ರಕಥೆಯ ಕಾರಣದಿಂದಾಗಿ ಯಶಸ್ಸು ಕಂಡ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರವನ್ನು ತಮ್ಮ ಮಾತಿಗೆ ಉದಾಹರಣೆಯಾಗಿ ನೀಡಿದರು.




ಚಿತ್ರದ ಕಥೆ ಲಕ್ಷ್ಮಣ್ ಭಾರದ್ವಾಜ್. ವೆಂಕಟ್ ಹಾಗೂ ಲಕ್ಷ್ಮಣ್ ಹಿರಿಯ ನಿರ್ಮಾಪಕ–ನಿರ್ದೇಶಕ ಸಿ.ವಿ. ಶಿವಶಂಕರ್ ಅವರ ಮಕ್ಕಳು. 'ಕನ್ನಡ ಕುವರ' ಚಿತ್ರದ ಖ್ಯಾತಿಯ ಶಿವಶಂಕರ್ ಕನ್ನಡ ಸಿನಿಮಾ ಸಂಸ್ಕೃತಿಯ ಪ್ರತಿನಿಧಿಯಂತೆ ನಮ್ಮೊಂದಿಗೆ ಇರುವವರು. ಅವರ ಪರಂಪರೆ ಮಕ್ಕಳ ಮೂಲಕ ಮುಂದುವರೆಯುವ ಆಶಯವನ್ನು ಗೋವಿಂದು ವ್ಯಕ್ತಪಡಿಸಿದರು.



# ಆಗಸ್ಟ್ ತಿಂಗಳಲ್ಲಿ ಮಾರ್ಚ್ ಜಪ

'ಮಾರ್ಚ್ 22' – ಇದು ಕೋಡ್ಲು ರಾಮಕೃಷ್ಣ ನಿರ್ದೇಶನದ ತೆರೆಕಾಣುತ್ತಿರುವ (ಆ. 25ರಂದು) ಸಿನಿಮಾ. ಕೋಡ್ಲು ಸದಭಿರುಚಿಯ ಹಾಗೂ ಕಾದಂಬರಿ ಆಧಾರಿತ ಸಿನಿಮಾಗಳಿಗೆ ಹೆಸರಾದವರು. ಈ ಚಿತ್ರದಲ್ಲೂ ಒಂದು ಸದಾಶಯವಿದೆ. ಅದು ನೀರಿನ ಮಹತ್ವಕ್ಕೆ ಸಂಬಂಧಿಸಿದ್ದು. ವಿಶ್ವದ ಬಹುತೇಕ ಭಾಗಗಳು ದಾಹ ಎದುರಿಸುತ್ತಿರುವ ಸಂದರ್ಭದಲ್ಲಿ ಕೋಡ್ಲು ಜಪಿಸುತ್ತಿರುವ ಜಲಮಂತ್ರಕ್ಕೆ ವಿಶೇಷ ಮಹತ್ವವಿದೆ.

ಆರ್ಯವರ್ಧನ್ ಚಿತ್ರದ ನಾಯಕ. ಮೇಘಶ್ರೀ ಮತ್ತು ದೀಪ್ತಿಶೆಟ್ಟಿ ನಾಯಕಿಯರು. ಸಂದೇಶಪ್ರಧಾನ ಚಿತ್ರದಲ್ಲಿ ಹಾಗೂ ಹಿರಿಯ ನಿರ್ದೇಶಕರ ಗರಡಿಯಲ್ಲಿ ಕೆಲಸ ಮಾಡಿರುವ ಖುಷಿ ಅವರದು. ದುಬೈನಲ್ಲಿ ನೆಲೆಸಿರುವ ಅನಿವಾಸಿ ಭಾರತೀಯ ಉದ್ಯಮಿ ಬಿ.ಆರ್. ಶೆಟ್ಟಿ ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದಾರೆ. ಶೆಟ್ಟಿ ಅವರ ಜನಪ್ರಿಯತೆಯನ್ನು ಬಳಸಿಕೊಂಡು ಚಿತ್ರವನ್ನು ಗಲ್ಫ್ ದೇಶಗಳಲ್ಲೂ ತೆರೆಕಾಣಿಸುವ ಉದ್ದೇಶ ನಿರ್ದೇಶಕರದು. ಚಿತ್ರದ ಕಥೆ ಕೂಡ ಅವರ ಉದ್ದೇಶಕ್ಕೆ ಪೂರಕವಾಗಿದೆ.

ಅನಂತನಾಗ್, ವಿನಯಾಪ್ರಸಾದ್, ಗೀತಾ, ಜೈಜಗದೀಶ್ ಅವರಂಥ ಹಿರಿಯ ಕಲಾವಿದರು ಹಾಗೂ ಸಾಧು ಕೋಕಿಲ, ಆಶಿಷ್ ವಿದ್ಯಾರ್ಥಿ, ಶರತ್ ಲೋಹಿತಾಶ್ವರಂಥ ಜನಪ್ರಿಯ ನಟರು ತಾರಾಗಣದಲ್ಲಿದ್ದಾರೆ. ಮಣಿಕಾಂತ್ ಕದ್ರಿ ಹಾಗೂ ರವಿಶೇಖರ್ ಸಂಗೀತ ಇರುವ ಈ ಚಿತ್ರದ ಡಬ್ಬಿಂಗ್–ರೀಮೇಕ್ ಹಕ್ಕುಗಳಿಗೆ ಬೇರೆ ಭಾಷೆಗಳ ನಿರ್ಮಾಪಕರಿಂದ ಬೇಡಿಕೆ ವ್ಯಕ್ತವಾಗಿದೆಯಂತೆ.

■ ರಘು